ಕರ್ನಾಟಕ ಸರ್ಕಾರ

ಕ್ರ.ಸಂ:ಬಿ1/ಭೂಮಿ/ಎಫ್‌ಸಿ/ರೋಡ್/
156224/2022-23

Email:dcfsagar123@gmail.com

ಕರ್ನಾಟಕ
ಅರಣ್ಯ
ಇಲಾಖೆ

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ**
**ಕಛೇರಿ, ಸಾಗರ ಪ್ರಾದೇಶಿಕ ಅರಣ್ಯ ವಿಭಾಗ,**
**ಸಾಗರ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ**
ದೂರವಾಣಿ ಸಂ: **08183-226071**

ದಿನಾಂಕ: 23.05.2024

ಗೆ,

ಕಾರ್ಯನಿರ್ವಾಹಕ ಅಭಿಯಂತರರು,
ನ್ಯಾಷನಲ್ ಹೈವೆ ಡಿವಿಷನ್,
ಲೋಕೋಪಯೋಗಿ ಭವನ,
ಬಾಲರಾಜ್ ಅರಸ್ ರೋಡ್, ಶಿವಮೊಗ್ಗ.

ಮಾನ್ಯರೇ,

**<u>Proposal No. FP/KA/ROAD/156224/2022</u>**

**ವಿಷಯ:-** Diversion of 18.844 Ha of Forest Land in Hosanagara (T), Shimoga (D) for Construction of 2L+PS Road from km 55.60 to km 90.70 Mavinakoppa of NH 766 C with Major Bridgs across Sharavathi Back Water.

**ಉಲ್ಲೇಖ:-**

1. ಪರಿವೇಶ್ ತಂತ್ರಾಂಶದಲ್ಲಿ ಸಲ್ಲಿಕೆಯಾದ ಎಫ್.ಸಿ ಪ್ರಸ್ತಾವನೆ ಸಂಖ್ಯೆ: FP/KA/ROAD/156224/2022.
2. ಶ್ರೀ ಗಿರೀಶ್ ಆಚಾರ್, ಬ್ರಹ್ಮೇಶ್ವರ, ಪುಣಜೆ ಗ್ರಾಮ, ಹೊಸನಗರ ತಾಲ್ಲೂಕು ಇವರ ಮನವಿ ದಿನಾಂಕ: 21.08.2023.
3. ಶ್ರೀ ವೀರೇಂದ್ರ ಪಾಟೀಲ್, ವಕೀಲರು, ಬೆಂಗಳೂರು ಇವರ ಮನವಿ ದಿನಾಂಕ: 01.02.2024.
4. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಅರಣ್ಯ-ಸಿ), ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: ಎಫ್.ಇ.ಇ/6/ಎಫ್.ಜಿ.ಎಲ್/2023(ಇ) ದಿನಾಂಕ: 14.02.2024.
5. ವಲಯ ಅರಣ್ಯಾಧಿಕಾರಿ, ಹೊಸನಗರ ವಲಯ, ಹೊಸನಗರ ಇವರ ಕಛೇರಿ ಪತ್ರ ಸಂಖ್ಯೆ: 155/2024-25 ದಿನಾಂಕ: 08.05.2024
6. ವಲಯ ಅರಣ್ಯಾಧಿಕಾರಿ, ನಗರ ವಲಯ, ನಗರ ಇವರ ಕಛೇರಿ ಪತ್ರ ಸಂಖ್ಯೆ: 93/2024-25 ದಿನಾಂಕ: 08.05.2024.
7. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪವಿಭಾಗ, ಹೊಸನಗರ ಇವರ ಕಛೇರಿ ಪತ್ರ ಸಂಖ್ಯೆ: 46/2024-25 ದಿ: 08.05.2024.
8. ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವೃತ್ತ, ಶಿವಮೊಗ್ಗ ರವರ ಇ.ಡಿ.ಎಸ್ ದಿನಾಂಕ: 22.05.2024.

********

ವಿಷಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು ವ್ಯಾಪ್ತಿಯಲ್ಲಿ Construction of 2L+PS Road from km 55.60 to km 90.70 Mavina koppa of NH 766 C with Major Bridgs across Sharavathi Back Water ಯೋಜನೆಗಾಗಿ ಸಾಗರ

ವಿಭಾಗ ವ್ಯಾಪ್ತಿಗೆ ಒಳಪಡುವ 7 ಗ್ರಾಮಗಳಿಂದ ಒಟ್ಟು 18.844 ಹೆಕ್ಟೆರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಿಡುಗಡೆಗೊಳಿಸಲು ಉಲ್ಲೇಖ (1)ರಲ್ಲಿ ಪರಿವೇಶ್ ತಂತ್ರಾಂಶದ ಮುಖಾಂತರ ಮೇಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಉಲ್ಲೇಖ (2) & (3) ರಲ್ಲಿ ಶ್ರೀ ಗಿರೀಶ್ ಆಚಾರ್, ಬ್ರಹ್ಮೇಶ್ವರ, ಮುಣಜೆ ಗ್ರಾಮ, ಹೊಸನಗರ ತಾಲ್ಲೂಕು ಮತ್ತು ಶ್ರೀ ವೀರೇಂದ್ರ ಪಾಟೀಲ್, ವಕೀಲರು, ಬೆಂಗಳೂರು ಇವರು ಪ್ರಸ್ತಾಪಿತ ರಸ್ತೆ ಹಾದುಹೋಗುವ ಹೊಸನಗರ ತಾಲ್ಲೂಕು, ಕಸಬಾ ಹೋಬಳಿ, ಗಂಗನಕೊಪ್ಪ ಗ್ರಾಮದ ಸರ್ವೆ ನಂ. 5 ರ ಪ್ರದೇಶವು 1998 ರಿಂದ 2018 ರವರೆಗೆ ಕಂದಾಯ ದಾಖಲೆಯಾದ ಪಹಣಿಯ ಕಲಂ 9 ರಲ್ಲಿ 'ಅರಣ್ಯ' ಎಂದು ನಮೂದಿಸಲಾಗಿರುತ್ತದೆ. ಆದರೆ 2018 ನೇ ಸಾಲಿನಲ್ಲಿ ಶ್ರೀ ಚಂದ್ರಶೇಖರ ನಾಯ್ಕ, ತಹಶಿಲ್ದಾರ್, ಹೊಸನಗರ ತಾಲ್ಲೂಕು, ಹೊಸನಗರ ಇವರು ಸದರಿ ಪ್ರದೇಶವನ್ನು ಎಂ.ಆರ್.ಹೆಚ್ 10/2017-18 ದಿನಾಂಕ: 25.06.2018 ರಂತೆ 'ಸರ್ಕಾರಿ ಮುಫತ್ತು' ಎಂದು ತಿದ್ದುಪಡಿ ಮಾಡುವ ಮೂಲಕ ಅರಣ್ಯ ಸಂರಕ್ಷಣಾ ಕಾಯ್ದೆ 1980 ಸೆಕ್ಷನ್-2ರ ಉಲ್ಲಂಘನೆ ಮಾಡಿರುತ್ತಾರೆ ಎಂದು ಸಲ್ಲಿಸಿದ ದೂರಿನ ಮೇರೆಗೆ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಅರಣ್ಯ-ಸಿ), ಬೆಂಗಳೂರು ರವರು ಈ ಕುರಿತು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಉಲ್ಲೇಖ(4) ರಲ್ಲಿ ನಿರ್ದೇಶನ ನೀಡಿರುತ್ತಾರೆ.

ಈ ಕುರಿತು ಗಂಗನಕೊಪ್ಪ ಗ್ರಾಮದ ಸರ್ವೆ ನಂ. 5 ಒಳಗೊಂಡತೆ ಪ್ರಸ್ತಾಪಿತ ಹೆದ್ದಾರಿ ಹಾದುಹೋಗುವ ಎಲ್ಲಾ ಅರಣ್ಯ ಪ್ರದೇಶವನ್ನು ಘಟಕಾಧಿಕಾರಿಗಳು ಪರಿಶೀಲಿಸಿ ಉಲ್ಲೇಖ(5), (6) & (7) ರಲ್ಲಿ ಈ ಕಛೇರಿಗೆ ವರದಿ ಸಲ್ಲಿಸಿರುತ್ತಾರೆ. ಘಟಕಾಧಿಕಾರಿಗಳ ವರದಿಯಂತೆ ಆಡುಗೋಡಿ-ಮಾವಿನಕೊಪ್ಪ ಮಾರ್ಗವಾಗಿ ಹಾದುಹೋಗುವ ಎನ್.ಎಚ್-766ಸಿ ರಸ್ತೆಗೆ ಉಪಯೋಗವಾಗುವ ಅರಣ್ಯ ಪ್ರದೇಶದ ಪರಿಷ್ಕೃತ ವಿವರ ಈ ಕೆಳಕಂಡಂತ್ತಿರುತ್ತದೆ.

| ಆಡುಗೋಡಿ-ಮಾವಿನಕೊಪ್ಪ ರಸ್ತೆ ವಿಸ್ತರಣೆ ಯೋಜನೆಗೆ ಉಪಯೋಗವಾಗಲಿರುವ ಅರಣ್ಯ ಪ್ರದೇಶದ ಪರಿಷ್ಕೃತ ವಿವರ | | | | | |
|---|---|---|---|---|---|
| ಕ್ರ. ಸಂ. | ಗ್ರಾಮ | ಅರಣ್ಯ ಪ್ರದೇಶದ ವಿವರ | ಸರ್ವೆ ನಂ. | ಪ್ರಸ್ತಾಪಿತ ರಸ್ತೆ ರಸ್ತೆಯ ಉದ್ದ (ಮೀ) | ವಿಸ್ತೀರ್ಣ (ಹೆಕ್ಟೇರ್) |
| 1 | ಗಂಗನಕೊಪ್ಪ | ಹಸ್ತಾಂತರಿತ ಅರಣ್ಯ | 13 | 84 | 0.220 |
| | | | 21 | 132 | 0.337 |
| | | | 5 | 142 | 0.430 |
| 2 | ಕಳೂರುಕಟ್ಟೆ | ಹಸ್ತಾಂತರಿತ ಅರಣ್ಯ | 136 | 23 | 0.062 |
| | | | 133 | 225 | 0.670 |
| 3 | ಸುತ್ತಾ | ಹಸ್ತಾಂತರಿತ ಅರಣ್ಯ | 10 | 545 | 1.635 |
| | | | 75 | 55 | 0.165 |
| | | | 62 | 270 | 0.810 |
| 4 | ಮಣಶೆಟ್ಟಿ | ಮಣಶೆಟ್ಟಿ ಸೆಕ್ಷನ್-4 | 38 | 622 | 1.866 |
| 5 | ಎಲ್. ಗುಡ್ಡೆಕೊಪ್ಪ | ಎಲ್. ಗುಡ್ಡೆಕೊಪ್ಪ ಮೀಸಲು ಅರಣ್ಯ | 45 | 74 | 0.222 |
| | | | 46 | 420 | 1.260 |
| | | ಪರಿಭಾವಿತ ಅರಣ್ಯ | 27 | 690 | 2.070 |
| 6 | ಹೆಬ್ಬುರುಳಿ | ಪರಿಭಾವಿತ ಅರಣ್ಯ | 204 | 1040 | 3.121 |
| | | ಹೆಬ್ಬುರುಳಿ ಮೀಸಲು ಅರಣ್ಯ | 221 | 1211 | 3.615 |
| | | | 51 | 1100 | 3.301 |
| | | | 44 | 488 | 1.465 |
| 7 | ಹೊಸೂರು | ಹಸ್ತಾಂತರಿತ ಅರಣ್ಯ | 43 | 166 | 0.501 |

| | | | | | |
|---|---|---|---|---|---|
| 8 | ಆಡುಗೋಡಿ | ಆಡುಗೋಡಿ ಮೀಸಲು ಅರಣ್ಯ | 74 | 664 | 1.992 |
| | | | 79 | 508 | 1.524 |
| **7 ಗ್ರಾಮಗಳಿಂದ ಒಟ್ಟು ವಿಸ್ತೀರ್ಣ** | | | | **8459** | **25.266 ಹೆ** |

ಉಲ್ಲೇಖ(1)ರ ಎಫ್.ಸಿ ಪ್ರಸ್ತಾವನೆ ಸಂಖ್ಯೆ: FP/KA/ROAD/156224/2022 ವರದಿ ಸಲ್ಲಿಸುವಾಗ 18.844 ಹೆಕ್ಟೇರ್ ಅರಣ್ಯ ಪ್ರದೇಶದ ಬಿಡುಗಡೆಗಾಗಿ ಈಗಾಗಲೇ ಸಮುಚಿತ ಮಾರ್ಗದಲ್ಲಿ ವರದಿ ಸಲ್ಲಿಸಿದ್ದು, ಈ ಮೇಲೆ ವಿವರಿಸಿದಂತೆ ಪ್ರಸ್ತಾಪಿತ ಅರಣ್ಯ ಪ್ರದೇಶದ ಮರು ಪರಿಶೀಲನೆ ನಡೆಸಿದಾಗ ಸದರಿ ಆಡುಗೋಡಿ-ಮಾವಿನಕೊಪ್ಪ ಮಾರ್ಗವಾಗಿ ಹಾದುಹೋಗುವ ಎನ್.ಎಚ್-766ಸಿ ರಸ್ತೆಗೆ 25.266 ಹೆಕ್ಟೇರ್ ಅರಣ್ಯ ಭೂಮಿ ಬಳಕೆಯಾಗಲಿರುವುದು ಕಂಡುಬಂದಿರುತ್ತದೆ.

ಆದ್ದರಿಂದ ಉಲ್ಲೇಖ (8)ರಲ್ಲಿ ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವೃತ್ತ, ಶಿವಮೊಗ್ಗ ರವರ ನಿರ್ದೇಶನದಂತೆ, ವಲಯ ಅರಣ್ಯಾಧಿಕಾರಿ, ಹೊಸನಗರ ಮತ್ತು ನಗರ ವಲಯ ಇವರೊಂದಿಗೆ ಸಮನ್ವಯ ಸಾಧಿಸಿ, ಪ್ರಸ್ತಾಪಿತ ರಸ್ತೆ ಹಾದುಹೋಗುವ ಅರಣ್ಯ ಪ್ರದೇಶದ ಮರುಮೋಜಣಿ ಕಾರ್ಯ ನಡೆಸಿ, ಪರಿಷ್ಕೃತ ಅರಣ್ಯ ಪ್ರದೇಶದ ಮಾಹಿತಿಯನ್ನು ಅಗತ್ಯ ದಾಖಲೆ ಮತ್ತು ನಕಾಶೆಗಳೊಂದಿಗೆ ಪರಿವೇಶ್ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ, 25.266 ಹೆಕ್ಟೇರ್ ಅರಣ್ಯ ಪ್ರದೇಶದ ಬಿಡುಗಡೆಗಾಗಿ ಪರಿಷ್ಕೃತ ಪ್ರಸ್ತಾವನೆಯನ್ನು ಈ ಕೆಳಸಹಿದಾರರ ಲಾಗಿನ್‌ಗೆ ಕಳುಹಿಸುವಂತೆ ತಮ್ಮಲ್ಲಿ ಕೋರಲಾಗಿದೆ.

ನಿಮ್ಮ ನಂಬುಗೆಯ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ